# ಹೊಸತು

## ಗೋಲ್ಡ್ ಫೇಸ್‌ವಾಶ್




ಕಾಸ್ಮೆಟಿಕ್ಸ್ ಮತ್ತು ಹರ್ಬಲ್ ಉತ್ಪನ್ನಗಳಿಗೆ ಹೆಸರಾದ ಪ್ರೊವೇದ ಹರ್ಬಲ್ಸ್, ಇದೀಗ ತ್ವಚೆಯ ರಕ್ಷಣೆಗಾಗಿ 24 ಕ್ಯಾರಟ್ ಗೋಲ್ಡ್ ಫೇಸ್ ವಾಶ್ ಎಂಬ ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ತ್ವಚೆಯ ಹೊಳಪಿಗೆ ಮತ್ತು ಅಂದಕ್ಕೆ

ಈ ಕ್ರೀಮ್ ಅತ್ಯಂತ ಸುರಕ್ಷಿತ ಮತ್ತು ಸೂಕ್ತವಾದದ್ದು ಎನ್ನುತ್ತದೆ ಕಂಪೆನಿ. ಇದನ್ನು ಗೋಲ್ಡ್ ಡಸ್ಟ್, ಅಲೊವೆರಾ ಮುಂತಾದ ವಸ್ತುಗಳನ್ನು ಹಾಕಿ ತಯಾರಿಸಲಾಗಿದೆ. 100 ಎಂಎಲ್ ಪ್ಯಾಕಿಂಗ್ ಬೆಲೆ ₹ 125.



## ಅತ್ಯಾಧುನಿಕ ಐರನ್ ಬೋರ್ಡ್

ಇಟಾಲಿಯನ್ ಶೈಲಿಯ ಗೃಹೋತ್ಪನ್ನ ತಯಾರಿಕಾ ಕಂಪೆನಿ 'ಗಿಮಿ ಇಂಡಿಯಾ', ಭಾರತೀಯ ಮಹಿಳೆಯರಿಗಾಗಿಯೇ ಅತ್ಯಾಧುನಿಕ ಮಾದರಿಯ ಐರನ್ ಬೋರ್ಡ್ ಅನ್ನು ಬಿಡುಗಡೆ ಮಾಡಿದೆ. ಐರನ್ ಬೋರ್ಡ್ ಹಗುರವಾಗಿದ್ದು, ಉತ್ತಮ ಗುಣಮಟ್ಟದಿಂದ ಕೂಡಿದೆ. ಇದನ್ನು ಎಲ್ಲಿ ಬೇಕಾದಲ್ಲಿ ಸುಲಭದಲ್ಲಿ ಕೊಂಡೊಯ್ಯಬಹುದು. ನಾಲ್ಕು ಅಡಿ ಉದ್ದ, 38 ಸೆಮೀ ಅಗಲವಿರುವ ಈ ಬೋರ್ಡ್ ತಾಪ ನಿವಾರಕ ಮೇಲ್ಮೈಯನ್ನು ಹೊಂದಿದೆ. ಹೀಗಾಗಿ ಇದು ಗ್ರಾಹಕ ಸ್ನೇಹಿ ಆಗಿದೆ ಎನ್ನುವುದು ಕಂಪೆನಿ ನೀಡುವ ವಿವರಣೆ.

ಬೆಲೆ ₹ 3,990. ವಿವರಕ್ಕೆ: 09886571641/ 07829881884

## ಸೌರಶಕ್ತಿಯ ಮಹೀಂದ್ರಾ ಕಾರು

ಮಹೀಂದ್ರಾ ಕಂಪೆನಿಯು 'ಸೌರವಿದ್ಯುತ್ ಚಾಲಿತ' ಮಹೀಂದ್ರಾ ಇ2ಇ ಕಾರನ್ನು ಬೆಂಗಳೂರಿನ ಮಾರುಕಟ್ಟೆಗೆ ಪರಿಚಯಿಸಿದೆ. ಈ ಕಾರಿಗೆ ಪೆಟ್ರೋಲ್‌ಟ್ಯಾಂಕ್ ಇಲ್ಲ. ಸೌರಶಕ್ತಿಯನ್ನು ವಿದ್ಯುತ್ ಆಗಿ ಪರಿವರ್ತಿಸಿ ಚಲಿಸುವುದು ಈ ಕಾರಿನ ದೊಡ್ಡ ಆಕರ್ಷಣೆ.

ಈ ಕಾರಿನಲ್ಲಿ ಕ್ಲಚ್, ಗೇರ್ ಎಲ್ಲವೂ ಅಟೊಮ್ಯಾಟಿಕ್. ಆಡಿಯೋ, ಡಿವಿಡಿ, ವೀಡಿಯೋ ಸೌಲಭ್ಯವಿದೆ. ಪುಟ್ಟ ಕಂಪ್ಯೂಟರ್ ಪರದೆಯ (ಟಚ್ ಸ್ಕ್ರೀನ್) ಮೂಲಕ ಕಾರಿನ ಏಸಿ ಮತ್ತು ಬಾಗಿಲುಗಳನ್ನು ನಿಯಂತ್ರಿಸಬಹುದು. ಬ್ಯಾಟರಿಯ ಸ್ಥಿತಿಗತಿ ಹಾಗೂ ಹೋಗುವ ದಾರಿಯನ್ನೂ ಅದು ತೋರಿಸುತ್ತದೆ. ಕಾರು






ಲಾಕ್ ಆಗಿದೆಯೆ ಇಲ್ಲವೆ ಎಂದು ನೀವಿದ್ದಲ್ಲಿಂದಲೇ ನಿಮ್ಮ ಮೊಬೈಲ್ ಮೂಲಕ ಪರಿಶೀಲಿಸಬಹುದು.

ಎಕ್ಸ್ ಶೋರೂಂ ಬೆಲೆ 6.49 ಲಕ್ಷ ರೂಪಾಯಿ. ಒಂದು ಲಕ್ಷ ರೂಪಾಯಿ ಹೆಚ್ಚುವರಿ ನೀಡಿದರೆ ಉಚಿತ ಸೌರಶಕ್ತಿ ಪಡೆಯಲು ಪ್ರತ್ಯೇಕ ಪ್ಯಾನೆಲ್‌ಅನ್ನು ನೀಡುತ್ತಾರೆ. ಮನೆಯಲ್ಲಿ ಈ ಪ್ಯಾನೆಲ್‌ಅನ್ನು ಬಿಡಿಸಿಟ್ಟು ಚಾರ್ಜ್ ಮಾಡಿಕೊಳ್ಳಬಹುದು.

ಲಿಥಿಯಂ ಬ್ಯಾಟರಿ ಹೊಂದಿರುವ ಈ ಕಾರು ಸಂಪೂರ್ಣ ಚಾರ್ಜ್ ಆಗಲು ಐದು ಗಂಟೆ ಬೇಕು. ಆಗ ಸಂಗ್ರಹವಾಗುವ 10 ಯುನಿಟ್ ವಿದ್ಯುತ್‌ನಲ್ಲಿ ಕಾರನ್ನು 100 ಕಿ.ಮೀ.ವರೆಗೆ ಓಡಿಸಬಹುದು. ಅತಿ ಹೆಚ್ಚೆಂದರೆ ಗಂಟೆಗೆ 81 ಕಿ.ಮೀ ವೇಗದಲ್ಲಿ ಚಲಿಸುತ್ತದೆ.

ಬೆಂಗಳೂರಿನಲ್ಲಿ ಸೌರಶಕ್ತಿ ಚಾರ್ಜ್ ಮಾಡಲು 100 ಘಟಕಗಳನ್ನು (ಪೆಟ್ರೋಲ್ ಬಂಕ್‌ನಂತೆ) ಸ್ಥಾಪಿಸಲಾಗಿದೆ. ಆದರೆ ಅಲ್ಲಿ ಒಂದು ಯುನಿಟ್ ವಿದ್ಯುತ್ ಚಾರ್ಜ್ ಮಾಡಲು ಅರ್ಧ ಗಂಟೆ ತಗುಲುತ್ತದೆ.

ದೆಹಲಿಯಲ್ಲಿ ಇದೇ ಕಾರು ಈಗಾಗಲೆ ಬೆಂಗಳೂರಿಗಿಂತ ಒಂದು ಲಕ್ಷ ರೂಪಾಯಿ ಕಡಿಮೆಗೆ ಸಿಗುತ್ತದೆ. ಯಾಕೆಂದರೆ ಅಲ್ಲಿಯ ಸರಕಾರ ಸಬ್ಸಿಡಿ ನೀಡುತ್ತಿದೆ. ಹೆಚ್ಚಿನ ಮಾಹಿತಿಗೆ: (91-22) 24901441

www.mahindra.com